1-30 P.M.

† ಶ್ರೀಮತಿ. ಮನೋರಮಾ ಮಧ್ವರಾಜ್.— ನಮ್ಮ ರಾಜ್ಯದಲ್ಲಿ ಸರ್ಟಿಫೈಡ್ ಸ್ಕೂಲುಗಳು ಹಾಗೂ ಅನೇಕ ಮಹಿಳಾ ಸೆಂಟರ್ಸ್ ಮತ್ತು ರಿಹ್ಯಾಬಿಲಿಟೇಷನ್ ಸೆಂಟರ್‌ಗಳು ಕೂಡ ಇನ್ನೂ ಬಾಡಿಗೆ ಕಟ್ಟಡ ಗಳಲ್ಲಿಯೇ ಇವೆ. ಇವುಗಳನ್ನು ಸ್ವಂತ ಕಟಡಗಳಿಗೆ ಬದಲಾಯಿಸಬೇಕಾದರೆ ನಮ್ಮದೇ ಆದ ಕಟ್ಟಡಗಳನ್ನು ನಾವು ಕಟ್ಟಿಕೊಳ್ಳಬೇಕು. ಅದಕ್ಕೆ ನಮ್ಮ ಬಡ್ಜೆಟ್ ಪ್ರಾವಿಷನ್ ನೋಡಿಕೊಂಡು ಸ್ವಂತ ಕಟ್ಟಡ ಕಟ್ಟುವ ಯೋಜನೆಯನ್ನು ಕೈಗೊಳ್ಳುತ್ತೇವೆ. ಮತ್ತೆ ಇಂಡಸ್ಟ್ರಿಯಲ್ ಮತ್ತು ಆಗ್ರಿಕಲ್ಚರಲ್‌ನ್ನು ಬೇರೆ ಬೇರೆ ಮಾಡಬೇಕಾದರೆ ಇವು ಹೆಬಿಚುಯಲ್ ಆಫೆಂಡರ್ಸ್ ಆಕ್ಟ್ ಕೆಳಗಡೆ ಬರುವುದರಿಂದ ಈ ಬಗ್ಗೆ ನಮ್ಮ ಸರ್ಕಾರ ಈಗಿರತಕ್ಕ ಆಕ್ಟನ್ನು ಅಬಾಲಿಷ್ ಮಾಡಬೇಕಾಗುತ್ತದೆ. ಅದನ್ನು ಮಾಡದೇ ಬೇರೆ ಯಾವುದಕ್ಕೂ ಕಟ್ಟಡವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಿಲ್ಲ. ಇನ್ನು ಆಗ್ರಿಕಲ್ಚರ್‌ಬೇಸ್ಡ್ ಮತ್ತು ಸರ್ಟಿಫೈಡ್ ಸ್ಕೂಲ್ ಸ್ಟಾಪಿಸಿ 14ವರ್ಷಕಿಂಥ ಮೇಲ್ಪಟ್ಟ ಮಕ್ಕಳಿಗೆ ವ್ಯವಸಾಯದಲ್ಲಿ ತರಬೇತಿ ಕೊಟ್ಟು ರಿಹ್ಯಾಬಿಲಿಟೇಟ್ ಮಾಡಲು ಸರ್ಕಾರ ಈ ಬಗ್ಗೆ ತೀವ್ರವಾಗಿ ಆಲೋಚನೆ ಮಾಡುತ್ತಿದೆ.

ಶ್ರೀ ಜೆ. ಎಲ್. ಕಬಾಡಿ.— ತಾವು ಹೇಳಿದಹಾಗೆ ಪ್ರೊಬೇಷನ್ ಆಫೆಂಡರ್ಸ್ ಆಕ್ಟ್‌ನ್ನು ಅಬಾಲಿಷ್ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ?

ಶ್ರೀಮತಿ. ಮನೋರಮಾ ಮಧ್ವರಾಜ್.—ಈಗಾಗಲೇ ಪ್ರೊಪೋಸಲ್ಸ್ ನಮ್ಮ ಡೈರೆಕ್ಟರ್ ಅವರಿಂದ ಸರ್ಕಾರಕ್ಕೆ ಬಂದಿದೆ ಅದನ್ನು ಸರ್ಕಾರ ಪರಿಶೀಲಿಸುತ್ತಾ ಇದೆಯೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಜೆ. ಎಲ್. ಕಬಾಡಿ.— ಇದು ಕೇಂದ್ರಸರ್ಕಾರದ ಕಾಯಿದೆ. ಇದು ರಾಜ್ಯಸರ್ಕಾರದ ಪರಿಮಿತಿಯಲ್ಲಿ ಬರುತ್ತದೆಯೇ ? ತಾವು ಇದನ್ನು ಆಲೋಚನೆ ಮಾಡಿದ್ದೀರಾ ?

ಶ್ರೀಮತಿ. ಮನೋರಮಾ ಮಧ್ವರಾಜ್.— ಈ ಆಕ್ಟ್‌ನ್ನು ಮಹಾರಾಷ್ಟ್ರ, ಗುಜರಾತ್ ಮತ್ತು ಮೈಸೂರಿನಲ್ಲಿ ಒಟ್ಟಿಗೆ ತಂದಿರುವುದರಿಂದ ಪೆಬಿಚುಯಲ್ ಆಫೆಂಡರ್ಸ್ ಬಗ್ಗೆ ನಮ್ಮಲ್ಲಿ ಅಷ್ಟು ಮಾಹಿತಿ ಇಲ್ಲ. ಆದ್ದರಿಂದ ಇದರ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಇದು ನ್ಯಾಯವಾದ ಪ್ರಶ್ನೆ ಇರುವುದರಿಂದ ಯೋಚನೆ ಮಾಡುತ್ತೇವೆ.

ಅಧ್ಯಕ್ಷರು.— ಇಲ್ಲಿಗೆ ಪ್ರಶ್ನೆಗಳು ಮುಗಿದವು.

QUESTIONS FOR AUSWERS ON THE DAY
(But not taken up)

ಅಡಿಕೆ ಸಂಸ್ಕರಣ ಸಹಕಾರಿ ಸಂಘಗಳಂ

೧೫೮೮ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಸಹಕಾರ ಮಂತ್ರಿಗಳು ಈ ವಿಷಯಂಗಳನ್ನು ದಯೆಯಿಟ್ಟು ತಿಳಿಸುವರೆ

(ಅ) ರಾಜ್ಯದಲ್ಲಿ ೧೯೭೨ ರಿಂದ ಈಚೆಗೆ ಎಷ್ಟು ಅಡಿಕೆ ಸಂಸ್ಕರಣ ಸಹಕಾರ ಸಂಘಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ ಮತ್ತು ಆ ರೀತಿ ಅನುಮತಿ ನೀಡಿದ ಸಂಸ್ಥೆಗಳಾವುವು ;

(ಆ) ಹಾಲಿ ತಾಲ್ಲೂಕಿನ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳ ಕಾರ್ಯವ್ಯಾಪ್ತಿಯಂ ಅಡಿಕೆ ಸಂಸ್ಕರಣವನ್ನೂ ಸಹ ಒಳಗೊಂಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದರೆ, ಆದೇ ಉದ್ದೇಶವನ್ನು ಹೊಂದಿದ ಸಹಕಾರ ಸಂಘ ಅಸ್ತಿತ್ವದಲ್ಲಿರುವಾಗ ಬೇರೆ ಒಂದು ಸಂಘಕ್ಕೆ ಅದೇ ಉದ್ದೇಶ ಸಾಧನೆಗೆ ಅನುಮತಿ ನೀಡಿರುವ ಔಚಿತ್ಯವೇನು,

(ಈ) ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೇ ಉದ್ದೇಶವನ್ನು ಹೊಂದಿದ ಸರಕಾರ ಸಂಘಗಳನ್ನು ಆಯಾ ತಾಲ್ಲೂಕಿನ ಒಂದೇ ಸಂಘದಲ್ಲಿ ಸೇರಿಸುವ ಯೋಜನೆಯಂ ಸರಕಾರದ ಪರಿಶೀಲನೆಯಲ್ಲಿದೆಯೇ ?

ಶ್ರೀ ಕೆ. ಎಚ್. ರಂಗನಾಥ್:—ಸಹಕಾರ ಮಂತ್ರಿಗಳು.

(ಅ) ೨ ಅಡಕೆ ಸಂಸ್ಕರಣ ಸಹಕಾರ ಸಂಘ ಸ್ಥಾಪಿಸಲು ಅನುಮತಿ ನೀಡಲಾಗಿದೆ.

(ಬ) ಅಡಿಕೆ ಪರಿಷ್ಕರಣ ಮತ್ತು ಮಾರಾಟ ಸಹಕಾರ ಸಂಘ, ನಿಯಮಿತ, ಸಾಗರ.

(೨) ದಿ ಸೆಂಟ್ರಲ್ ಅರೆಕನೆಟ್ ಮಾರ್ಕೆಟಿಂಗ್ ಅಂಡ್ ಪ್ರೋಸೆಸಿಂಗ್ ಕೋ-ಆಪರೇಟಿವ್ ಲಿಮಿಟೆಡ್ ಮಂಗಳೂರು.

(ಅ) ಹೌದು.

(ಇ) ಅಡಿಕೆಯು ರೊಕ್ಕದ ಬೆಲೆಯಾಗಿದ್ದು ಅದರ ಉತ್ಪಾದನೆ, ಸಂಸ್ಕರಣ ಹಾಗೂ ಮಾರಾಟ ಇವು ಉಳಿದ ವ್ಯವಸಾಯೋತ್ಪನ್ನಗಳಿಗಿಂತ ಭಿನ್ನವಾಗಿದೆ. ಇದಕ್ಕೆ ಸ್ಥಾನಿಕವಾಗಿ ಮಾರ್ಕೆಟ್ ಇಲ್ಲ. ದೊಡ್ಡ ಬಾಂಡವಾಲು ಬೇಕು ಮತ್ತು ಸಂಸ್ಕರಣ ಮಾರಾಟಕ್ಕೆ ತಜ್ಞ ಸಲಹೆ ಬೇಕು. ಇದನ್ನು ಪ್ರತಿಯೊಂದು ತಾಲ್ಲೂಕಿನ ಮಾರಾಟ ಸಹಕಾರ ಸಂಘಗಳು ಕೈಕೊಳ್ಳುವುದು ಸೂಕ್ತವಲ್ಲವೆಂದು ಹಾಗೂ ಅನುಕೂಲಕರವಲ್ಲವೆಂದು ಕಂಡುಬಂದುದರಿಂದ ಈ ಸಂಘ ಸ್ಥಾಪನೆಗೆ ಅನುಮತಿ ನೀಡಲಾಯಿತು.

(ಈ) ತಾಲೋಕು ಮಾರ್ಕೆಟಿಂಗ್ ಸಹಕಾರಿ ಸಂಘಗಳಿಗೆ ಸಂಬಂಧಪಟ್ಟ ಹಾಗೆ ಇಂತಹ ನಿರ್ದಿಷ್ಟ ಯೋಜನೆ ಸದ್ಯಕ್ಕೆ ಇಲ್ಲ.

ಕಲಬೆರೆಕೆಯು ಹೆಂಡದ ಮಾರಾಟ

259. ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ).—ಅಬ್ಕಾರಿ ಹಾಗೂ ಕಾರ್ಮಿಕ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಹೆಂಡವನ್ನು ವಿವಿಧ ರೀತಿಯಲ್ಲಿ ಕಲಬೆರಕೆ ಮಾಡಿ ಮಾರಾಟ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ;

(ಆ) ಈ ಬಗ್ಗೆ ಈವರೆವಿಗೆ ಎಷ್ಟು ಕೇಸುಗಳನ್ನು ದಾಖಲೆ ಮಾಡಿಕೊಳ್ಳಲಾಗಿದೆ ;

(ಇ) ಎಷ್ಟು ಜನ ಹೆಂಡದ ವರ್ತಕರು ಶಿಕ್ಷೆಗೆ ಗುರಿಯಾಗಿದ್ದಾರೆ ;

(ಈ) ಹೆಂಡವನ್ನು ಶುದ್ಧವಾಗಿಟ್ಟು ಮಾರಾಟ ಮಾಡಲು ವರ್ತಕರಿಗೆ ಒತ್ತಾಯಿಸುವಂತೆ ಸರ್ಕಾರ ಕೈಕೊಂಡ ಕ್ರಮಗಳೇನು ?

ಶ್ರೀ ಎಸ್. ಎಂ. ಯಾಹ್ಯಾ (ಅಬ್ಕಾರಿ ಹಾಗೂ ಕಾರ್ಮಿಕ ಮಂತ್ರಿಗಳು).—

(ಅ) ಬಂದಿದೆ.

(ಆ) 20 ಕೇಸುಗಳು.

(ಇ) ಹತ್ತು ಜನ.

(ಈ) ಈ ವಿಚಾರದಲ್ಲಿ ಇಲಾಖೆಯ ಅಧಿಕಾರಿಗಳಿಗೆ, ಹೆಂಡದ ಅಂಗಡಿಗೆ ಹೋಗಿ ಹೆಂಡವನ್ನು ತೆಗೆದುಕೊಂಡು ರಾಸಾಯನಿಕ ತಜ್ಞರಿಗೆ ಕಳುಹಿಸಿಕೊಡುವಂತೆ ತಿಳಿಸಿರುವುದಲ್ಲದೆ ಏನಾದರೂ ಕಲಬೆರಕೆ ಕಂಡುಬಂದಲ್ಲಿ ಕಾನೂನು ಮೇರೆಗೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿರುತ್ತೆ.

Persons detained under COFEPOSA and MISA

279. SRI M. S. KRISHNAN(Malleswaram).—Will the Chief Minister be pleased to state:—

(a) the number of persons detained in the Jails of Karnataka under (1) COFEPOSA and (2) MISA ;